ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 4, September-October 2025, Pp. 74-80
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಾಧವಿ ಮತ್ತು ಶೋಷಿತ ಮಹಿಳೆ

**ಮುತ್ತಪ್ಪ ಗಂಗವ್ವ ಮ್ಯಾಗೇರಿ**
ಸಂಶೋಧನ ವಿದ್ಯಾರ್ಥಿ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***
*ಮಾಧವಿ ಆಧುನಿಕ ಕಾಲಘಟ್ಟದಲ್ಲಿ ಪುರಾಣವನ್ನು ವಿಘಟಿಸಿ ಮರು ನಿರ್ಮಿಸುವ ಮೂಲಕ ಪೌರಾಣಿಕ ಸ್ತ್ರೀ ಪಾತ್ರದೊಡನೆ ಆಧುನಿಕ ಸ್ತ್ರೀ ತಲ್ಲಣಗಳನ್ನು, ವೇದನೆಗಳನ್ನು ಸಂಯೋಜಿಸಿ ಸಾರ್ವಕಾಲಿಕವಾಗಿ ಸ್ತ್ರೀ ವೇದನೆಯನ್ನು ತೆರೆದಿಡುವ ಕಾದಂಬರಿ. ಸ್ತ್ರೀಯರ ಬರೆವಣಿಗೆಗೆ ಮನ್ನಣೆ ಇಲ್ಲದ ಕಾಲದಲ್ಲಿಯೇ ಮಹಿಳಾಪರ ದನಿಯನ್ನು ತಮ್ಮ ಪೌರಾಣಿಕ ಕಾದಂಬರಿ ಮಾಧವಿ ಮೂಲಕ ಹೊರಡಿಸುತ್ತಾರೆ ಅನುಪಮಾ ನಿರಂಜನರವರು. ಇದರ ಮೂಲಕ ಪುರಾಣದ ಕಥಾ ಎಳೆಯೊಂದಕ್ಕೆ ಹೊಸದಿಕ್ಕನ್ನೂ, ಸ್ತ್ರೀ ವೇದನೆಯ ಅಭಿವ್ಯಕ್ತಿಗಾಗಿ ತಳಹದಿಯನ್ನೂ ರೂಪಿಸುತ್ತಾರೆ.*

***Keywords:*** *ಕನ್ನಡ ಸಾಹಿತ್ಯ, ಅನುಪಮಾ ನಿರಂಜನ, ಮಾಧವಿ, ಶೋಷಿತ ಮಹಿಳೆ.*

**ಪೀಠಿಕೆ**

ಮಾಧವಿ ಗಂಗಾ–ಯಮುನಾ ಸಂಗಮ ಸ್ಥಳದ ಪ್ರತಿಷ್ಠಾನ ನಗರದ ಮಹಾರಾಜ ಯಯಾತಿ ಮತ್ತು ದೇವಯಾನಿಯರ ಸಾಕುಮಗಳು. ಅವಳಲ್ಲದೇ ಯದು ಮತ್ತು ದೃಹ್ಯು ಎಂಬಿಬ್ಬರು ಗಂಡು ಮಕ್ಕಳಿದ್ದರು. ತಾನು ಹುಟ್ಟುತ್ತಲೇ ತಾಯಿ ತೀರಿಕೊಂಡ ಕಾರಣಕ್ಕಾಗಿ ತಾಯಿಯ ಮಮತೆಯಿಂದ ವಂಚಿತಳಾಗಿ, ಅಪ್ಪನಿಂದ ಅಸಡ್ಡೆಗೂ, ತನ್ನ ಸೌಂದರ್ಯದ ಕಾರಣಕ್ಕಾಗಿ ಮಲತಾಯಿಯ ತಾತ್ಸಾರಕ್ಕೂ ಒಳಗಾಗಿ ಬೆಳೆದ ಸುಂದರ ಯುವತಿ. ಯೌವನದ ಆಸೆಯಂತೆ ಸುಂದರ ಯುವಕನನ್ನು ಮದುವೆಯಾಗಿ ಭವಿಷ್ಯದ ಕನಸ ಹೊತ್ತ ಮಾಧವಿಯ ಬದುಕು ವ್ಯಥೆಯಾಗುವುದು ಪುರುಷ ಕಾರಣಕ್ಕಾಗಿ! ವಿಶ್ವಾಮಿತ್ರನ ಶಿಷ್ಯನಾಗಿ ವಿದ್ಯಾರ್ಜನೆ ಪೂರೈಸಿದ ಗಾಲವ, ಗುರು ಬೇಡವೆಂದರೂ ಮೊಂಡುತನ ಮಾಡಿ 'ಮೈಯಲ್ಲಾ ಬೆಳ್ಳಗೆ ಒಂದು ಕಿವಿ ಮಾತ್ರ ಕಪ್ಪಗೆ ಇರುವ ಎಂಟುನೂರು ಕುದುರೆಗಳ' ಗುರುದಕ್ಷಿಣೆಯ ಹೊರೆ ಹೊತ್ತುಕೊಂಡ.

ದಾನ ನೀಡಲು ಪ್ರಸಿದ್ಧನಾಗಿದ್ದ ಯಯಾತಿಯಲ್ಲಿಗೆ ಗಾಲವ ಬಂದು ಕುದುರೆಗಳನ್ನು ಕೇಳಿದ. ಯಯಾತಿ ನಮ್ಮಲ್ಲಿ ಕುದುರೆಗಳಿಲ್ಲ ಎಂದು ಪರ್ಯಾಯವಾಗಿ ದಾನ ಕೊಟ್ಟಿದ್ದು ಸ್ವಯಂವರದ ಲಹರಿಯಲ್ಲಿದ್ದ ಮಾಧವಿಯನ್ನ! ನನ್ನ ಮಗಳನ್ನು ದಾನವಾಗಿ ತೆಗೆದುಕೊಳ್ಳಿ ಮುಂದೆ ಯಾರಾದರೂ ರಾಜರಿಗೆ ಕೊಟ್ಟು ನಿಮ್ಮ ಗುರುದಕ್ಷಿಣೆ ಪಡೆದುಕೊಳ್ಳಿ ಎಂದು. ಗಾಲವ ರಾಜಕುಮಾರಿಯಾದ ಮಾಧವಿಯನ್ನು ನಡೆಸಿಕೊಂಡು ಕರೆದೊಯ್ದು ಹರ್ಯಶ್ವ ಎಂಬ ರಾಜನಲ್ಲಿ ಬಿಟ್ಟ, ಅದೂ ಎರಡನೂರು ಕುದುರೆಗಳಿಗಾಗಿ ಒಂದು ವರ್ಷಕ್ಕೆ! ಗಂಡು

***Please cite this article as:*** ಮುತ್ತಪ್ಪ ಗಂಗವ್ವ ಮ್ಯಾಗೇರಿ. (2025). ಮಾಧವಿ ಮತ್ತು ಶೋಷಿತ ಮಹಿಳೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 74–80

ಸಂತಾನವಿರದ ಹರ್ಯಶ್ವನಿಗೆ ಗಂಡು ಸಂತಾನ ಒದಗಿಸಿದ ಮಾಧವಿಯನ್ನು ಮೂರು ತಿಂಗಳೊಳಗೇ ಗಾಲವ ಹೋಗಿ ಸೇರಿಸಿದ್ದು ದೀವೋದಾಸನ ಅಂತಃಪುರಕ್ಕೆ. ಅದೂ ಕೂಡ ಎರಡು ನೂರು ಕುದುರೆಗಳಿಗೆ ಬದಲಾಗಿ ಸಂತಾನವಿರದ ರಾಜನಿಗೆ ಒಂದು ಸಂತಾನ ಒದಗಿಸುವ ತನಕ. ತದನಂತರ ಉಶೀನರ ಬಳಿ ಒಂದು ವರ್ಷದ ಕಾಲಾವಧಿಯವರೆಗೆ ಅವಳನ್ನು ಬಿಟ್ಟು ಒಟ್ಟು ಆರುನೂರು ಕುದುರೆಗಳನ್ನು ಸಂಪಾದಿಸಿದ ಗಾಲವನಿಗೆ ಕಡೆಯಲ್ಲಿ ಉಳಿದ ಎರಡುನೂರು ಕುದುರೆಗಳು ಸಿಕ್ಕದಿದ್ದಾಗ ಸೋತು ಅವಳನ್ನು ಒಯ್ಯುವುದು ವಿಶ್ವಾಮಿತ್ರನಲ್ಲಿ. ವಿಶ್ವಾಮಿತ್ರನಿಗೂ ಸಹ ಒಂದು ವರ್ಷದಲ್ಲಿ ಮಗನನ್ನು ನೀಡುವ ಮೂಲಕ ಗಾಲವನನ್ನು ಗುರುದಕ್ಷಿಣೆಯಿಂದ ಋಣಮುಕ್ತನನ್ನಾಗಿಸುತ್ತಾಳೆ. ಕಡೆಯಲ್ಲಿ ಗಾಲವ ಮತ್ತೆ ಯಯಾತಿಯಲ್ಲಿಗೆ ಮಾಧವಿಯನ್ನು ಬಿಟ್ಟು ಹೋಗುತ್ತಾನೆ. ಮರಳಿ ಬಂದ ಮಗಳಿಗೆ ಕಡೆಯಲ್ಲಿ ಯಯಾತಿ ಸ್ವಯಂವರ ಏರ್ಪಡಿಸಿದ್ದನ್ನು ವಿರೋಧಿಸಿ ಮಾಧವಿ ಬಾಳನ್ನು ಧಿಕ್ಕರಿಸಿ ಕಾಡಿಗೆ ಹೋಗುವಲ್ಲಿಗೆ ಕಾದಂಬರಿಯು ಅಂತ್ಯ ಕಾಣುತ್ತದೆ. ಆದರೆ ಅವಳ ಸಂವೇದನೆಯನ್ನು ಹಾಗೆಯೇ ಕಾಡಲು ಉಳಿಸಿಬಿಡುತ್ತದೆ.

**ಗುರು – ಶಿಷ್ಯರು**

ಇಡೀ ಕಾದಂಬರಿಯನ್ನು ಗಮನಿಸಿದಾಗ ಕಂಡುಬರುವ ಅಂಶವೆಂದರೆ ಪುರುಷನ ಹಿತಾಸಕ್ತಿಗಾಗಿ ಬಲಿಯಾದವಳು ಸ್ತ್ರೀ. ಶಿಕ್ಷಣ ಮುಗಿಸಿದ ಗಾಲವ ತನ್ನ ಸೊಕ್ಕಿನಿಂದ ಗುರುದಕ್ಷಿಣೆ ನೀಡಲು ಪರಿತಪಿಸಿ ಮಾಧವಿಯ ಕನಸನ್ನೂ, ಬಾಳನ್ನೂ ನಾಶಮಾಡುತ್ತಾನೆಂದಾದರೆ ಅವನು ಪಡೆದ ಶಿಕ್ಷಣ ಎಂತಹದ್ದು ಎಂಬ ಪ್ರಶ್ನೆ ಏಳುತ್ತದೆ. ಅವನಿಗೆ ಆಯ್ಕೆಗಳಿರಲಿಲ್ಲ ಎಂದು ಹೇಳಲಾಗುವುದಿಲ್ಲ. ಯಯಾತಿ ಕುದುರೆಗಳಿಲ್ಲ ಮಗಳನ್ನು ಒಯ್ಯಿ ಎಂದಾಗ ಗಾಲವ 'ಈಗ ಬೇಡ. ಒಮ್ಮೆ ಎಲ್ಲ ರಾಜರ ಬಳಿ ಬೇಡಿ ಬರುತ್ತೇನೆ ಎಲ್ಲಿಯೂ ಸಿಕ್ಕದಿದ್ದರೆ ಅಥವಾ ಇದ್ದವರು ದಾನವಾಗಿ ಕೊಡದಿದ್ದರೆ ಅವಳನ್ನು ಕರೆದೊಯ್ಯುತ್ತೇನೆ' ಎನ್ನಬಹುದಿತ್ತು. ಅಥವಾ ಸಂವೇದನೆಯುಳ್ಳ ಸನ್ಯಾಸಿಯಾಗಿದ್ದರೆ ನನಗೆ ಕುದುರೆಗಳನ್ನು ಕೊಡಲಾದರೆ ಕೊಡು, ಅಥವಾ ಕುದುರೆಗಳನ್ನು ಕೊಳ್ಳಲು ಆರ್ಥಿಕ ಸಹಾಯ ಮಾಡು. ಅದರ ಹೊರತು ಮಗಳನ್ನು ದಾನವಾಗಿ ಕೊಡುವುದು ಸೂಕ್ತವಲ್ಲ' ಎನ್ನಬಹುದಿತ್ತು.

ಮರುಮಾತಿಲ್ಲದೇ ಮಾಧವಿಯನ್ನು ಕರೆದೊಯ್ಯಲು ಒಪ್ಪುವಲ್ಲಿ ಅವನ ನಿಷ್ಕಾರುಣ, ಶುಷ್ಕ ಮನಸ್ಥಿತಿಯ ಅರಿವು ನಮಗಾಗುತ್ತದೆ. ಹೋಗಲಿ, ಮಾಧವಿಯನ್ನು ದಾನವಾಗಿ ಪಡೆದು ಕಾಡಿನಲ್ಲಿ ಅವಳು ಮಲಗಿದ್ದಾಗ ಅವಳನ್ನು ಮೋಹಿಸುವ, ಕಾಮಾತುರನಾದವನು ವಿದ್ಯೆಯನ್ನು ಸಾಧಿಸಿದ್ದನೇ? ಎಂಬ ಪ್ರಶ್ನೆ ಶೇಷವಾಗುತ್ತದೆ. ಅವಳಲ್ಲಿ ಅನುರಕ್ತನಾಗಲು ತೊಡಗಿದವ ಸನ್ಯಾಸತ್ವವನ್ನು ತ್ಯಜಿಸಿ, ಮಾಧವಿಯನ್ನು ವರೆಸಿ, ಅವಳಿಗೆ ಯಥೇಚ್ಛವಾಗಿ ಪ್ರೀತಿ, ಮಮಕಾರ ನೀಡಿ, ಸಂಸಾರಿಯಾಗಿ ಗುರುದಕ್ಷಿಣೆ ಪೂರೈಸಿದ್ದರೂ ಆಗುತ್ತಿತ್ತು. ಆದರೆ ಹಾಗೇ ಮಾಡದೇ ತನ್ನ ಗುರುದಕ್ಷಿಣೆಯ ಪೂರೈಕೆಗಾಗಿ ಅಕ್ಷರಶಃ ಮಾಧವಿಯನ್ನು ವಿಕ್ರಯ ವಸ್ತುವಾಗಿ ಬಳಸಿದ. ಈ ಬಗೆಯ ಸಾಧನೆ ಯಾವ ಪುರುಷಾರ್ಥಕ್ಕಾಗಿ? ಇದರಿಂದ ಅವನ ಋಷಿತ್ವಕ್ಕೆ ಯಾವ ಬೆಲೆಯೂ ಸಿಕ್ಕುವುದಿಲ್ಲ. ಗುರುದಕ್ಷಿಣೆ ಪೂರೈಸಿ ಅವನೇನೂ ಸಾಧಿಸಿದಂತಾಗಲಿಲ್ಲ. ವಿದ್ಯಾಗುರುವಿನ ಮುಂದೆಯೇ ಸೋಲೊಪ್ಪಿಕೊಳ್ಳದ ಅವನ ಮನಸ್ಥಿತಿ ಸ್ವಾಭಿಮಾನವಲ್ಲ ಒಣಪ್ರತಿಷ್ಟೆ ಮತ್ತು ಅಹಂನ ಸಾಕಾರರೂಪ.

ಉಳಿದ ಇನ್ನೂರು ಕುದುರೆಗಳು ಸಿಕ್ಕದಾದಾಗ ಗಾಲವ ಮಾಧವಿಯನ್ನು ತನ್ನ ಗುರು ವಿಶ್ವಾಮಿತ್ರನ ಬಳಿ ಒಯ್ದಾಗ ಅವನು ಪರಿತಪಿಸುವುದು ಹೀಗೆ, "ಎಂಟುನೂರು ಕುದುರೆಗಳ ಬದಲಾಗಿ ಮಾಧವಿಯನ್ನು ಸ್ವೀಕರಿಸಿ ಎಂದು ಹೇಳಿ ಇವಳನ್ನು

ನನ್ನಲ್ಲಿ ತಂದು ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು ನಾನೇ ಇವಳನ್ನ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ಕು ಮಂದಿ ಪುತ್ರರನ್ನು ಪಡೆಯುತ್ತಿದ್ದೆ"[1] ಈ ಸಂದರ್ಭವನ್ನು ಗಮನಿಸಿದಾಗ ವಿಶ್ವಾಮಿತ್ರನ ಮನೋಕಾಂಕ್ಷೆ ಅಭಿವ್ಯಕ್ತಗೊಳ್ಳುತ್ತದೆ. ಅಲ್ಲದೇ, ಒಂದು ವರ್ಷ 'ಭಗವತಿ'ಯಾಗುವ ಮಾಧವಿಗೆ ವಿಶ್ವಾಮಿತ್ರನ ಕಾಮಾತುರದ ಪರಿಚಯ ಮೊದಲನೇ ದಿನವೇ ಆಗುತ್ತದೆ. ತನಗೆ ಆಯಾಸವಾಗಿದೆ ಎಂದರೂ ಕೇಳದೆ ಮಾಧವಿ ಮೇಲೆ ಆಕ್ರಮಿಸುವ ವಿಶ್ವಾಮಿತ್ರ ಕೊಡುವ ಕಾರಣ "ಕಾಮವನ್ನು ಬೇಕಾದ ಹಾಗೆ ಸವಿದವಳು ನೀನು ಅದಕ್ಕೆ ನಿನಗೆ ಬಯಕೆ ಇಲ್ಲ. ಆದರೆ ನನಗೆ ಇರೋ ಹಸಿವು ಹಲವು ವರ್ಷಗಳದ್ದು ಅದನ್ನು ತಣಿಸದೆ ಹೋದರೆ ನಾನು ಹುಚ್ಚನಾಗ್ತೀನಿ!".[2] ಅವಳಿಗೆ ಬೇಕಾದಂತೆ ಬದುಕು ಸಾಗಿಸದಂತೆ ಮಾಡಲಾಗಿದ್ದರೂ, ಕಾಮದ ವಿಚಾರದಲ್ಲಿ ವಿಶ್ವಾಮಿತ್ರನಾಡುವ 'ಬೇಕಾದ ಹಾಗೆ ಸವಿದವಳು ನೀನು' ಎಂಬ ಮಾತು ಅವನ ಹೀನ ಮನಸ್ಥಿತಿಯನ್ನು ಕಾಣಿಸುತ್ತದೆ. ಜೊತೆಗೆ ತನಗೆ ಉಂಟಾದ ತಾಳಲಾರದ ಕಾಮಾತುರಕ್ಕೆ ಗುರಾಣಿಯನ್ನಾಗಿ ಅವನು ಇಡುವುದು ಜಗತ್ತಿಗೆ ಶ್ರೇಷ್ಠನಾಗುವ ಪುತ್ರಸಂತಾನ! ಇದು ಪುತ್ರಕಾಂಕ್ಷೆಯನ್ನಿಟ್ಟುಕೊಂಡು ಮಾಡಲಾದ ಹೆಣ್ಣಿನ ಲೈಂಗಿಕ ಶೋಷಣೆ.

ನಾಲ್ಕು ವೇದಗಳನ್ನು ಬಲ್ಲವನೂ, ಯಜ್ಞ ಯಾಗಾದಿಗಳಲ್ಲಿ ಪಾರಂಗತನದವನೂ ಆದ ವೃದ್ಧ ಋಷಿಯ ಚತುರ್ಪುತ್ರರ ಆಸೆ ಜಗತ್ತಿನ ಒಳಿತಿಗಲ್ಲ, ಮಾಧವಿಯನ್ನು ಕಂಡು ಅವಳ ದೇಹದ ಸೌಂದರ್ಯಕ್ಕೆ ಮರುಳಾಗಿ ಹುಟ್ಟಿಕೊಂಡ ಅವನ ಕಾಮದ ತೃಷೆ ಮಾತ್ರ ಎಂಬುದು ವಿದಿತವಾಗುತ್ತದೆ. ಈ ಋಷಿಯ ಮಾತು ಕೇವಲ ಆಗಿನ ಕಾಲಕ್ಕೆ ಸೀಮಿತವಾಗದೇ, ಈಗಿನ ಕಾಲದಲ್ಲಿಯೂ ಅನೇಕ ಮಠಗಳಲ್ಲಿ ಇಂತಹ ಅನೇಕ ದುಷ್ಕರ್ಮಿಗಳು ಸ್ವಾಮಿಗಳ ರೂಪದಲ್ಲಿರುವ ಮತ್ತು ಅವರ ಕಳ್ಳಾಟಗಳು ಬಯಲಿಗೆ ಬರುವ ವರದಿಗಳು ಬರುತ್ತಲೇ ಇವೆ. ಇಂತಹ ಸಮಾಜದಲ್ಲಿ ಹೆಣ್ಣಿಗೆ ಯಾವ ರೀತಿ ರಕ್ಷಣೆ ಒದಗಿಸಬೇಕು ಎಂದು ತಿಳಿಯದ ಕಾಲದಲ್ಲಿ ನಾವಿದ್ದೇವೆ.

ಇನ್ನು ಗುರುಕುಲದಲ್ಲಿ ನಡೆಯುವ ಸಂವಾದಗಳಲ್ಲಿ ವಿಶ್ವಾಮಿತ್ರನ ಮತ್ತೊಂದು ಮುಖ ಬಯಲಾಗುವುದನ್ನು ಕಾಣಿಸಲಾಗಿ ದೆ.

**"ಬ್ರಾಹ್ಮಣ ಎಂದರೆ ಯಾರು?**

"ಕಾಮ ಕ್ರೋಧಗಳನ್ನು ಜಯಿಸಿದವನೆ ಬ್ರಾಹ್ಮಣೋತ್ತಮ ಅವನು ಹುಟ್ಟಿನಿಂದ ಬ್ರಾಹ್ಮಣ ಆಗಲೇಬೇಕೆಂದು ನಿಯಮವೇನು ಇಲ್ಲ ಕಾಮವನ್ನು ಭೋಗವನ್ನು ದಾಟಿದವನೇ ಬ್ರಾಹ್ಮಣ ಎನ್ನಲು ಅಡ್ಡಿ ಇಲ್ಲ. ಕಾಮ ಕ್ರೋಧ ಜಯಿಸಿದವನೆಂದರೆ ಅಹಂಕಾರ ಸ್ವಾರ್ಥವನ್ನು ಜಯಿಸಿದವನು ಎಂದರ್ಥ".[3]

ಹುಟ್ಟಿನಿಂದ ಕ್ಷತ್ರಿಯ ಸಾಧನೆಯಿಂದ ಬ್ರಹ್ಮರ್ಷಿ ಈ ಎಲ್ಲಾ ಮಾತುಗಳನ್ನು ಕೇಳಿದಾಗ ಅದು ವಿಶ್ವಾಮಿತ್ರನ ಯೋಗ್ಯತೆಗೆ ಒಗ್ಗುತ್ತದೆಯೇ? ಎನ್ನುವ ಪ್ರಶ್ನೆ ಮೂಡುತ್ತದೆ. ಅಲ್ಲದೇ 'ತಾನು ಬೋಧಿಸುವ ಧರ್ಮ ತಾನು ಪಾಲಿಸಲಿಕ್ಕಲ್ಲ ಅದು ಬೇರೆಯವರ ಮೇಲೆ ಹೇರುವುದಕ್ಕೆ' ಎಂಬ ಅವನ ಧೋರಣೆಯನ್ನು ಪ್ರಶ್ನಿಸುವ ಮೂಲಕ ತೋರುತ್ತಾಳೆ. ಇದನ್ನು ಗಮನಿಸಿದಾಗ ಶಿಷ್ಯನಾದ ಗಾಲವ ಗುರು ವಿಶ್ವಾಮಿತ್ರರಿಂದ ಕಲಿತ ವಿದ್ಯೆಯ ಸತ್ವ ಪ್ರಶ್ನಾರ್ಹವಾಗುತ್ತದೆ. ಒಮ್ಮೆ ಒಂದು ರಾತ್ರಿ ಮಾಧವಿಗೆ ತಾನು ಸುಮಾರು ಮೂರುವರೆ ವರ್ಷ ಕಷ್ಟಪಟ್ಟು ಮೂರು ರಾಜರಿಗೆ ದೇಹವನ್ನು ಅರ್ಪಿಸಿ ತಂದ ಕುದುರೆಗಳ ಬಗ್ಗೆ ಕೇಳುತ್ತಾಳೆ. ಅದಕ್ಕೆ ವಿಶ್ವಾಮಿತ್ರ ನೀಡುವ ನಿರ್ಲಕ್ಷ್ಯಯುತ ಉತ್ತರ ಅವಳ ವೇದನೆ ಹೆಚ್ಚಿಸುತ್ತದೆ.

**'ನಿಮಗೆ ಉಪಯೋಗ ಇಲ್ಲದಿರುವ ವಸ್ತುನ ನೀವು ಯಾಕೆ ಬಯಸಿದ್ರಿ ?'**

'ಗಾಲವ ಹಟ ಹಿಡಿದ ಅವನ ಕೈಲಾಗಬಾರದು ಅಂಥ ವಸ್ತು ಇರ್ಲಿ ಅಂತ ಇದನ್ನು ಹೇಳ್ದೆ' ಎನ್ನುವ ಆತನ ಉಡಾಫೆ ಉತ್ತರದಲ್ಲಿ ಮಾಧವಿಗಾದ

ಅನ್ಯಾಯ, ಶೋಷಣೆಯ ಬಗ್ಗೆ ಮರುಕವಾಗಲಿ ಅಥವಾ ಸ್ತ್ರೀಪರ ಕಾಳಜಿಯಾಗಲಿ ಸುತಾರಾಂ ಇಲ್ಲದಿರುವುದು ಕಾಣುತ್ತದೆ. ಮೇಲಾಗಿ ಅವನ "ಅದನ್ನು ಕಷ್ಟ ಅಂತ ಯಾಕೆ ಭಾವಿಸ್ತಿ ನಾಲ್ಕು ತೇಜಸ್ವಿ ಮಕ್ಕಳ ತಾಯಿಯಾಗುವುದು ಪುಣ್ಯದ ಕೆಲಸ"[4]ಎಂಬ ಹುಸಿಸಾಂತ್ವನ ಬೇರೆ! ಇದನ್ನು ಮಾಧವಿ "ನಾನಾಗಿ ಈ ಸಂಬಂಧಗಳನ್ನು ಇಷ್ಟಪಟ್ಟಿದ್ರೆ ಆ ಮಾತು ಬೇರೆ ಇದು ಬಲವಂತ ಮಾಘ ಸ್ನಾನ ನೀವು ಗಾಲವರು ಸೇರಿಕೊಂಡು ನನ್ನ ಬದುಕನ್ನ ಮೂರಾಬಟ್ಟೆ ಮಾಡಿಬಿಟ್ರಿ."[5] ಎಂದು ಪ್ರಶ್ನಿಸುತ್ತಾಳೆ. ಇದಕ್ಕೆ 'ಸಾಕು ಬಾಯಿ ಮುಚ್ಚು. ಹೆಂಗಸು ಹೆಚ್ಚು ಮಾತನಾಡಬಾರದು' ಎನ್ನುವ ಮೂಲಕ ವಿಶ್ವಾಮಿತ್ರ 'ತನ್ನ ಶೋಷಣೆಯ ಮೂಲ ನೀವೇ ಇಬ್ಬರು ನಿಮ್ಮ ಹುಡುಗಾಟಕ್ಕೆ ಬಲಿಯಾದವಳು ನಾನು' ಎನ್ನುವ ಮಾಧವಿಯ ಆರ್ತಧ್ವನಿಯಲ್ಲಿ ಅಡಗಿಸಿದನು. ಈ ಬಗೆಯ ಧೋರಣೆಯಿಂದ ವಿಶ್ವಾಮಿತ್ರನ ಕುರಿತು ಅನೇಕ ಪ್ರಶ್ನೆಗಳು ನಮ್ಮಲ್ಲಿ ಕಾಣುತ್ತವೆ. ಬರಿ ಕಾಮಕ್ರೋಧಗಳನ್ನು ತುಂಬಿಕೊಂಡ ಇವರು ಅವಳ ದೇಹ ಸೌಂದರ್ಯ ಸವಿದರೆ ಹೊರತು ಅವಳಿಗೂ ಮನಸ್ಸಿದೆ; ಅದಕ್ಕೊಂದು ತುಡಿತವಿದೆ ಎಂದು ಒಮ್ಮೆಯಾದರೂ ಯೋಚಿಸಲೇ ಇಲ್ಲ ಹೀಗಾಗಿಯೇ ಮಾಧವಿಯ ಶೋಷಣೆ ಮುಂದುವರೆಯುತ್ತಾ ಬಂದಿತು ವಿನಃ ಕೊನೆಗೊಳ್ಳಲಿಲ್ಲ.

ಒಂದರ್ಥದಲ್ಲಿ ಮಾಧವಿಯ ಸಮಸ್ಯೆಯ ಮೂಲವನ್ನು ಹುಡುಕಲೇ ಬೇಕೆಂದು ಹೊರಟರೆ ಅದು ಒಯ್ದು ನಿಲ್ಲಿಸುವುದು ತಾಯಿತಂದೆಯರಾದ ದೇವಯಾನಿ–ಯಯಾತಿಯರ ಬಳಿ. ಮಾಧವಿ ಹುಟ್ಟಿದ್ದಕ್ಕೆ ಮಡದಿ ಸತ್ತಳು ಎಂಬ ತಾತ್ಸಾರದ ಭಾವ ಯಯಾತಿಯಲ್ಲಿದ್ದರೆ, ಮಲಮಗಳು ಎಂಬ ಕಾರಣಕ್ಕೆ ಮತ್ಸರ ಭಾವ ದೇವಯಾನಿಗೆ. ಮಾಧವಿಯ ಸ್ವಯಂವರದ ಮಾತುಕಥೆಗಳು ನಡೆದಿದ್ದಾಗಲೇ ಕುದುರೆ ಯಾಚಿಸಿದ ಗಾಲವನಿಗೆ ಇಬ್ಬರೂ ಮಾತಾಡಿ ಅವಳನ್ನೇ ದಾನವಾಗಿ ಕೊಡುವಷ್ಟು ಕಠೋರವಾಗಿ ಬಿಡುತ್ತಾರೆ.

**ಯಯಾತಿ – ದೇವಯಾನಿ**

ತಂದೆ ತಾಯಿ ಎಂದರೆ ದೇವರ ಸಮಾನ ಎಂಬ ನಂಬಿಕೆ ಇದೆ ಆದರೆ ಮಾಧವಿ ಜೀವನದಲ್ಲಿ ಸುಳ್ಳು ಎನಿಸಿತು. ಗಾಲವ ಬಂದು ಭಿಕ್ಷೆ ಕೇಳಿದಾಗ ಮಾಧವಿ ನಮಗೆ ಭಾರವಾಗಿದ್ದಾಳೆ ಅವಳನ್ನು ಧಾನವಾಗಿ ಕೊಟ್ಟು ನನ್ನ ಧರ್ಮವನ್ನು ಮೆರೆಯುತ್ತೇನೆ ಎಂಬ ಭಾವನೆ ತಂದೆಯಾದವನ ಬಾಯಲ್ಲಿ ಬರುವುದು ಎಷ್ಟು ಹೀನ ಇನ್ನು ಪುರುಷ ಮನಸ್ಥಿತಿ ಇರುವ ತಾಯಿ ದೇವಯಾನಿಯಿಂದ ಮಾಧಾವಿಗೆ ಇಂಥ ಶೋಷಣೆ ಒದಗಲು ಇವರೇ ಮುಖ್ಯ ಕಾರಣರಾಗುತ್ತಾರೆ. ಯಯಾತಿಯು ನನ್ನನ್ನ ಪ್ರಜೆಗಳು ಮಗಳನ್ನು ದಾನ ಕೊಟ್ಟು ದಾನ ಶೂರ ಎಂದು ಹೊಗಳುತ್ತಾರೆ ಅಲ್ಲದೆ ಈ ದಾನದಿಂದ ನನ್ನ ಧರ್ಮ ಸಂಕಟ ನಿವಾರಣೆಯಾಗುತ್ತದೆ ಎಂದು ಮಾಧವಿಯನ್ನು ದಾನ ಮಾಡಲು ನಿಶ್ಚಯಿಸಿದ.

ಇನ್ನು ಮಾಧವಿ ಐದು ವರ್ಷ ಕಳೆದು ಮರಳಿ ಯಯಾತಿ ಅಂತಪುರಕ್ಕೆ ಬಂದಾಗ ಅವಳನ್ನ ಕಂಡು ದಿಗ್ಭ್ರಾಂತನಾದನು. "ಮಾಧವಿ ಕಂಡುಚೆನ್ನಾಗಿದ್ದೀಯ ಮಗು? ಎಂದು ಕೇಳಿದ ಇನ್ನು ಜೀವಂತವಾಗಿದ್ದೀನಿ ಅಪ್ಪ ನೀನು ದಾನ ಕೊಟ್ಟ ಮೇಲೆ ಐದು ವರ್ಷ ನಾನು ಎಷ್ಟು ಕೊರಗಿದ್ದೀನಿ ಅನ್ನೋದು ಆ ದೇವರು ಒಬ್ಬನಿಗೆ ಗೊತ್ತು!ಯಯಾತಿಯನ್ನು ಅಪರಾಧಿ ದೃಷ್ಟಿಯಿಂದ ತೀಕ್ಷ್ಣವಾಗಿ ಕಂಡು ಅವಳ ಮನಸ್ಸಿನಲ್ಲಿ ಎಷ್ಟು ಕೊರಗಿದೆ, ದ್ವೇಷ ಅಸೂಹೆ ಎಲ್ಲವನ್ನು ಒಳಗೊಂಡು ಈ ಮಾತು ಮಾಧವಿಯ ಮೂಲಕ ಲೇಖಕಿ ಹೇಳಿಸಿದ್ದಾರೆ . ಈ ಐದು ವರ್ಷ ನಡೆದ ವಿಚಾರವನ್ನು ಗಾಲವ ಮುನಿ ಯಯಾತಿಗೆ ತಿಳಿಸಿದಾಗ ಯಯಾತಿ ನೀವು ಮುನಿಗಳಲ್ಲ ಕಟುಕರು! ಏನು ತಿಳಿಯದ ಹುಡುಗಿನ ಕರ್ಕೊಂಡು ಹೋಗಿ ಇಷ್ಟು ಜನರಿಗೆ ಅವಳನ್ನ ಮಾರಿ ಅವಳ ಬಾಳನ್ನ ಹಾಳು ಮಾಡಿಬಿಟ್ಟಿರಿ"[6]

ಗಾಲವ ಕೆರಳಿ ನುಡಿದ ಈ ಅಪರಾಧದಲ್ಲಿ ನಿನ್ನದು ಪಾಲಿದೆ ಮಹಾರಾಜ ನೀನು ದಾನ ಕೊಡದೆ ಇದ್ದಿದ್ದರೆ ನಾನವಳನ್ನು ಎಲ್ಲೂ ಕಕೊರ್ಂಡು ಹೋಗೋಕೆ ಆಗ್ತಿರಲಿಲ್ಲ ಎಂದು ಯಯಾಯಿತಿಯನ್ನು ದೋಷಿಸುತ್ತಾನೆ. ಆದರೆ ಅದು ಸತ್ಯವೇ ಅಲ್ಲವೇ ಅವಳನ್ನ ದಾನ ಕೊಡುವ ಬದಲು ಧನಕನಗಳನ್ನ ಕೊಡಬಹುದಿತ್ತು? ದಾನವಿಲ್ಲವೆಂದರೆ ನಡೆಯುತ್ತಿತ್ತು. ಅವಳನ್ನ ದಾನ ಮಾಡಿದರೆ ಧರ್ಮವೆನಿಸುತ್ತದೆ ಎಂದು ಧರ್ಮದ ಹೆಸರಿನಲ್ಲಿ ಅವಳನ್ನು ದಾನ ಕೊಟ್ಟಿದ್ದು ಎಷ್ಟು ಸರಿ? ಮತ್ತೆ ಇಷ್ಟೆಲ್ಲಾದರೂ ಇದರ ಪಾಪವನ್ನು ತೊಳೆದುಕೊಳ್ಳಲು ಸ್ವಯಂವರ ಏರ್ಪಡಿಸಿ ಅವಳಿಗೆ ಮದುವೆ ಮಾಡಿ ಪಾಪವನ್ನು ಕಳೆದುಕೊಳ್ಳುವುದು ಒಳ್ಳೆಯದು ಎನ್ನುವುದು ಎಷ್ಟು ಸರಿ? ಮಾಧವಿ ದುರಂತಕ್ಕೆ ತಂದೆ ತಾಯಿಗಳೆ ಮುಖ್ಯ ಕಾರಣ.

**ರಾಜರುಗಳು**

ಹರ್ಯಶ್ವ, ದೀವೋದಾಸ, ಉಶೀನರ ಈ ಮೂವರು ರಾಜರು ಅವಳಲ್ಲಿ ಕಾಮ ಮೋಹ ಪ್ರೇಮಗಳಿಗೆ ಇವರ ಬೆಲೆ ಕೊಟ್ಟವರು ಅವಳನ್ನ ಭೋಗಿಸಿ ಅವರ ಕೆಲಸವಾದ ಮೇಲೆ ಆಕೆಯನ್ನ ಅಷ್ಟೇ ನಿರಾಸಕ್ತಿಯಿಂದ ಹೊರ ಹಾಕುವವರು, ಧರ್ಮದ ಹೆಸರಿನಲ್ಲಿ ಅವಳನ್ನು ಆ ರೀತಿ ಶೋಷಿಸುವುದು ಎಷ್ಟು ಸರಿ ಇಂಥವರು ಇವರು ರಾಜರು ವೀರರು ಶೂರರು ಧೀರರು ಒಬ್ಬರಿಗಾದರೂ ಅವಳ ಬಗೆಗೆ ಅನುಕಂಪ ತೋರಲಿಲ್ಲ ಎಂತಹ ನಿಕೃಷ್ಟ ಭಾವನೆ ಹೊಂದಿದವರು ಇವರು ತಮ್ಮ ರಾಜ್ಯಕ್ಕೆ ಮತ್ತು ರಾಜ್ಯ ಪರಂಪರೆ ಮುಂದುವರೆಯಲು ಅವಳನ್ನ ಭೋಗಿಸಿ ಮಕ್ಕಳನ್ನ ಪಡೆಯುವುದು ಎಷ್ಟು ಯೋಗ್ಯವೆನಿಸುತ್ತದೆ.? ಇನ್ನು ನಾಲ್ಕು ಜನರಲ್ಲಿ ಬಾಳ್ವೆ ಮಾಡಿ ನಾಲ್ಕು ಮಕ್ಕಳನ್ನು ಹೆತ್ತು ಮಕ್ಕಳನ್ನು ಬಿಟ್ಟು ಹೋಗುವುದು ಅವಳ ಸಂಕಟ ಎಷ್ಟು? ಮಕ್ಕಳನ್ನ ಅಗಲವುದು ಎಷ್ಟು ನೋವಿನ ಸಂಗತಿಯಾಗಿದೆ ಅವರ ಭಾವನೆಗೆ ಬೆಲೆ ಇಲ್ಲದಾಗಿದೆ. ರಾಜರು ಇವಳ ಕಾಮ ಪ್ರೇಮವನ್ನ ಬಯಸಿದರೆ ವಿನಹ ಅವಳನ್ನು ಪ್ರೀತಿ ವಾತ್ಸಲ್ಯದಿಂದ ಕಾಣಲಿಲ್ಲ.

ಉದಾಹರಣೆಗೆ ಹರ್ಯಶ್ವನೆನ್ನುತ್ತಾನೆ

"ಮುನಿವರ್ಯ ಈ ಕನ್ಯಾಯನ್ನ ನೋಡಿದಾಕ್ಷಣ ಇವಳಲ್ಲಿ ಮೋಹಿತನಾಗಿದ್ದೇನೆ ಕನ್ಯಾ ಶುಲ್ಕವೆಂದು ಎಷ್ಟು ಧನಕನಗಳು ಬೇಡವೇ ಬೇಡ [7] ಎಂದಾಗ ಇವರು ಅವಳ ದೇಹ ಸೌಂದರ್ಯವನ್ನು ಕಂಡು ಮೋಹಿತರಾಗಿ ಅವಳನ್ನ ಭೋಗಿಸುವ ಇದ್ದವರೆ ಹೊರತು ಅವಳನ್ನು ಕರುಣೆಯಿಂದ ಕಂಡವರಲ್ಲ ಹೀಗೆ ಇವರೆಲ್ಲರೂ ಕೂಡಿ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಇವಳ ಶೋಷಣೆಯಲ್ಲಿ ಭಾಗಿಯಾದವರು ಇಂತಹ ಹೆಣ್ಣಿನ ಜೀವನವನ್ನು ಹೇಸಿ ಅವಳು ಕಾಡಿಗೆ ನಡೆದಳು ಇಲ್ಲ .... ಇಲ್ಲ.....ಇವರೆಲ್ಲರೂ ಅವಳನ್ನ ಕಾಡಿಗೆ ಅಟ್ಟಿದರು. ಅವನು ವೀರನು ಶೂರನು ಉದಾರಿಯುಧರ್ಮಿಷ್ಟ ವಿನಯವಂತನು ಆಗಿರಬೇಕು ಅವನ ಮೇಲಾಗಿ ಏಕ ಪತ್ನಿತ್ವ ವ್ರುತನಾಗಿರಬೇಕು. ಒಬ್ಬಳ ಮಹಿಳೆ ತಾನು ಮದುವೆಯಾಗುವ ಗಂಡ ಹೇಗಿರಬೇಕು ಎನ್ನುವ ಕಲ್ಪನೆ ಮಾಡಿಕೊಳ್ಳುವುದು ಸಹಜ ಅದು ಕಲ್ಪನೆಯಾಗಿಯೇ ಉಳಿಯುವುದು ಸರ್ವೆ ಸಾಮಾನ್ಯವಾಗಿ ವಿಷಯವಾಗಿತ್ತು. ಈ ಕಾದಂಬರಿಯ ಮೂಲಕ ಈ ಮಾತು ಬಂದಿದೆ ಮಾಧವಿ ತನ್ನ ಸಖಿಯೊಂದಿಗೆ ನನ್ನ ಪತಿ ಹೇಗಿರಬೇಕು ಎಂದು ಹೇಳುತ್ತಾಳೆ. ಆದರೆ ಸಖಿ ದಿನನಿತ್ಯದ ಸಮಾಜದಲ್ಲಿ ಕಂಡುಬರುವ ಮಹಿಳೆಯರ ಮೇಲಿನ ಅನಾಚಾರಗಳನ್ನು ಗೊತ್ತಿದ್ದವಳು ಇಂಥ ಪತಿ ಸಿಗಬಹುದೇ ರಾಜರಿಗೆ ನೂರಾರು ದಾಸಿಯರು ಇರುತ್ತಾರೆ ಒಬ್ಬಳೇ ಪತ್ನಿಯನ್ನ ಅವರು ಎಂದಿಗೂ ಹೊಂದುವುದಿಲ್ಲ ಅವರು ಹೆಚ್ಚೆಚ್ಚು ಮದುವೆಯಾದಷ್ಟು ಅವರ ಗೌರವ ಹೆಚ್ಚಾಗುತ್ತದೆ ಎನ್ನುವುದು ಅವರ ಕಲ್ಪನೆ ಮತ್ತು ಈ ರಾಜ್ಯಕ್ಕೆ ಅನೇಕ ಪುರುಷರನ್ನ ಕೊಟ್ಟು ರಾಜ್ಯವನ್ನ ಸಂರಕ್ಷಣೆ ಮಾಡುತ್ತೇವೆ ಎನ್ನುವುದು ಅವರ ವಾದ ಮಹಿಳೆಯನ್ನು ಕಾಮಿಸುವುದು ಭೋಗಿಸುವುದು

ಅಷ್ಟೇ ಅವರ ಕಾರ್ಯ ಆ ಹೆಣ್ಣಿನ ನೋವು ನಲಿವು ಶೋಷಣೆ ಅವರ ಅರವಿಗೆ ಬಾರದು ಎನ್ನುವುದು ಅವಳ ಮಾತಿನಲ್ಲಿ ನೋಡಬಹುದು.

"ದೇವ ಅಪ್ಸರ ಗಂಧರ್ವರಿಗೆ ಮಿಗಿಲಾದ ಸೌಂದರ್ಯವುಳ್ಳ ಮಾಧವಿಯನ್ನು ಯಾರಾದರೂ ಪುಣ್ಯಾತ್ಮ ರಾಜನಿಗೆ ಕೊಟ್ಟು ನಿಮ್ಮ ಗುರುದಕ್ಷಿಣೆ ಬೇಕಾದ ಅಶ್ವಗಳ ಕನ್ಯಾಶುಲ್ಕ ರೂಪದಲ್ಲಿ ದೊರಕಿಸಿಕೊಳ್ಳಬೇಕು ಎಂದು ಪ್ರಾರ್ಥನೆ;[8] ಈ ಮಾತು ತಂದೆ ಹೇಳುವ ಮಾತು ಈ ಮಾತನ್ನು ಕೇಳಿದ ಮಾಧವಿಗೆ ಹೇಗಾಗಿರಬಾರದು, ಮಗಳು ಎನ್ನುವ ಕನಿಕರ ಇಲ್ಲದ ತಂದೆಯನ್ನು ಕಂಡು ತನಗಾದ ನೋವನ್ನು ಯಾರೊಂದಿಗೆ ಹೇಳಿಕೊಳ್ಳುವುದು ಇಲ್ಲಿ ಶೋಷಣೆಯ ಮರೆಮಾಚದಂತೆ ನೇರವಾಗಿ ನಿರ್ದಯವಾಗಿ ಆಗುವಂತೆ ಶೋಷಣೆಯಲ್ಲಿ ಅವಳಿಗೆ ಆಗುವ ನೋವನ್ನ ತಿಳಿಸುವ ಮೂಲಗಳು ಇಲ್ಲದೆ ಸಾಗುವುದು ದುರ್ದೈವವೇ ಎನ್ನಬಹುದು ಅವಳಿಗೆ ಸಾಯಲು ಸಹ ಸ್ವಾತಂತ್ರ್ಯವಿಲ್ಲ ಬದುಕಲು ಮೊದಲೇ ಸ್ವತಂತ್ರವಿಲ್ಲ ಇಂತಹ ಸಂದರ್ಭದಲ್ಲಿ ಅನುಭವಿಸುವುದು ಕಷ್ಟ ಮಾಧವಿ ನಾನು ಧರ್ಮಬಂಧನಕ್ಕೆ ಕಟ್ಟು ಬಿದ್ದಿದ್ದೇನೆ ಇನ್ನು ಮೇಲೆ ನೀನು ಗಾಲವರ ವಸ್ತು ಇಲ್ಲಿ ಮಹಿಳೆಯ ಶೋಷಣೆಯ ಬಗೆಗೆ ಅರಿವು ಅರಿಯದವರು ಧರ್ಮದ ಅಂಧತಿಯಲ್ಲಿ ಮುಳುಗಿದ್ದಾರೆ ಒಂದು ಹೆಣ್ಣು ಮಾರುವ ಮೂಲಕ ಅದೊಂದು ವಸ್ತು ಎನ್ನುವ ಮಾತು ಕಳ್ಳನ ಹೆಚ್ಚಿಕಿಸುವಂತದ್ದು ಸ್ತ್ರೀಯನ್ನು ಒಂದು ವಸ್ತು ಮಾಡಿ ಅದನ್ನು ಅವರ ಆಟಕ್ಕೆ ಬಳಸಿಕೊಳ್ಳುವುದು ಇಲ್ಲಿ ನೋಡಬಹುದು.

"ಹರ್ಯಶ್ವ ... ಮಾಧವಿಯಲ್ಲಿ ನಾನು ಯಥೇಚ್ಛವಾಗಿ ಕಾಮ ಸುಖ ಸವಿದು ಪುತ್ರ ಸಂತಾನ ಪಡೆಯುತ್ತೇನೆ ಆನಂತರ ಅವಳನ್ನು ನಿಮಗೆ ವಾಪಸ್ ಕೊಡುವೆ. ಆಗ ಅವ್ಳನ್ನು ಇನ್ನೊಬ್ಬ ರಾಜನಿಗೆ ಒಪ್ಪಿಸಿ ಉಳಿದ ಅಶ್ವಗಳನ್ನು ಅವನಿಂದ ಪಡೆದುಕೊಳ್ಳಿ ಅದರಲ್ಲಿ ದೋಷವೇನು"[9] ಇದು ತಮ್ಮ ಕಾಮವನ್ನು ಪೂರೈಸಿಕೊಳ್ಳಲು ಬೆಲೆ ಕಟ್ಟುವ ಅಂದಿನ ನೀಚ ಸಮಾಜವನ್ನು ಎಷ್ಟೇ ದಿಕ್ಕರಿಸಿದರು ಕಡಿಮೆಯೇ ಅವಳಲ್ಲಿ ಸಂತಾನ ಪಡೆದು ಸಮಾಜಕ್ಕೆ ನಿನ್ನ ಸೇವೆ ಅಮೋಘವಾದದ್ದು ಎಂದು ಅವನ ಕೊನೆಗೆ ತಿರಸ್ಕರಿಸುವುದು ಕೃತ್ಯಕರವಾಗಿದೆ ಅಂಥ ಧರ್ಮದಲ್ಲಿ ಮುಳುಗಿದ ಅಂದಿನ ರಾಜರು ಸ್ತ್ರೀಯ ಅಂದ ಚಂದದ ಬಗೆಗೆ ಅವಳ ಕಾಮವನ್ನು ಅನುಭವಿಸೋದಕ್ಕೆ ಹೊರತು ಅವಳನ್ನ ಪೂಜಿಸುವುದಕ್ಕಲ್ಲ ಕವಿಗಳು ಸಹ ಒಂದು ಹೆಣ್ಣಿನ ಅಡಿಯಿಂದ ಮುಡಿಯುವವರೆಗೂ ಅಂದವನ್ನು ಸವಿದು ಅದನ್ನ ಬರೆದು ಹೊಗಳುವುದು ನೋಡಬಹುದು.

12ನೇ ಶತಮಾನದಲ್ಲಿ ಸಹ ವಚನಕಾರ್ತಿ ತನ್ನ ವೇಶ್ಯಾವೃತ್ತಿ ಬಗೆಗೆ ಪುರುಷರು ಮಾಡುವ ಕಾಮಕ್ರೋದಗಳ ಬಗೆಗೆ ಸ್ತ್ರೀಯನ್ನು ಅನುಭವಿಸಿ ಅವಳನ್ನು ಹಿಂಸಿಸುವ ಪ್ರಕ್ರಿಯೆ ಒಂದು ವಚನದಲ್ಲಿ ಕಾಣಬಹುದಾಗಿದೆ.

***"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ***
***ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ***
***ವ್ರತಹೀನನನರಿದು ಬೆರೆದಡೆ***
***ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯಾ***
***ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜೇಶ್ವರ"***[10]

ಪುರುಷ ತನ್ನ ಕಾಮ ಪ್ರಚೋದನೆಯಲ್ಲಿ ತನಗೆ ಆದ ಅನುಭವವನ್ನು ಮತ್ತೆ ಮತ್ತೆ ಮಾರುಕಲಿಸಬೇಕು ಇಂತಹ ದಿನ ಎಂದು ಹಂಬಲ ಪಡುವವನು ......ಹೆಣ್ಣಿಗೆ ಆದ ನೋವನ್ನ ಕಾಣುವುದು ಇನ್ನು ಕ್ರಿಸ್ತಪೂರ್ವ 1000 ಹಿಂದಿನ ಈ ವಿಚಾರವನ್ನು ಕೇಳಿದಾಗ ಹೆಣ್ಣಿನ ನೋವು ಅರಿಯುವುದು ಮುಖ್ಯವಾಗಿದೆ. ಮಾಧವಿ ಸಂಕಟ ತನಗೆ ಹುಟ್ಟಿದರೆ ಗಂಡು ಮಗುವಿನ ಜನನವೇ ಆಗಲಿ ಹೆಣ್ಣು ಆದರೆ ಅವಳಿಗೆ ನನ್ನ ಅಂತ ಕಷ್ಟ ಅವಳಿಗೆ ಬೇಡ ಇಂಥ ಹೇಸಿಗೆ ಸಂಪ್ರದಾಯದ ನಿಲುವನ್ನು ತನ್ನ ಮನದಲ್ಲಿ ಅರಿಯುತ್ತಾಳೆ. ಹೀನ ಬದುಕುವುದಕ್ಕಿಂತ

ಸಾಯುವುದು ಪಾಡು ಎನ್ನುವಂತಿಲ್ಲ ಅವಳಿಗೆ ಸಾಯುವ ಸ್ವಾತಂತ್ರ್ಯವೂ ಇಲ್ಲ ಎಂದು ಹೆಣ್ಣಿನ ಕುಲಕ್ಕೆ ಶಪಿಸುತ್ತಾಳೆ. ತನ್ನದಲ್ಲದ ದೇಹ? ಜೀವನ, ಪ್ರೇಮ, ಮದುವೆಗೆ ಸಂಬಂಧಿಸಿದ ಮಹಿಳೆಯರ ವಾಸ್ತವ ಸ್ಥಿತಿಗಳು ಎಂದಿನಿಂದಲೂ ಸಾಹಿತ್ಯಕ್ಕೆ ವಸ್ತುಗಳೇ ಆಗಿವೆ. ಈ ವಸ್ತುಗಳನ್ನು ಪುರುಷರು ತಮ್ಮ ದೃಷ್ಟಿಗೆ ತಕ್ಕಂತೆ ಸಾಹಿತ್ಯದಲ್ಲಿ ಸೃಷ್ಟಿಸಿದರೆ, ಅ ಚಿತ್ರಿತ ಮಹಿಳಾ ರೂಪಗಳು ಓದುಗರಲ್ಲಿ ಕರುಣೆ, ಮರುಕ, ವಿಷಾದಗಳನ್ನು ಹುಟ್ಟಿಸಿರುವುದು ಸಾಧ್ಯ. ಸ್ತ್ರೀಯರು ತಮ್ಮದೇ ದೇಹವನ್ನು ಅದರ ಅನುಭವಗಳನ್ನು ಶೋಧಿಸಿಕೊಳ್ಳುತ್ತಾ ಬರೆದರೆ ಜನರು ಅದು ಬರಹವೆಂದೂ, ಅನುಭವಕ್ಕೆ ಕೊಟ್ಟ ಸಾಂಕೇತಿಕ ಅಭಿವ್ಯಕ್ತಿಯೆಂದೂ ಭಾವಿಸಲು ಸಿದ್ಧರಿರುವುದಿಲ್ಲ. ಬರಹದಲ್ಲಿ ದಾಖಲಾದ ಅನುಭವಕ್ಕೂ ಅದನ್ನು ಬರೆದ ಮಹಿಳೆಗೂ ಗಂಟುಹಾಕಿಬಿಟ್ಟು, ಆಕೆಯ ಚಾರಿತ್ರ್ಯವಧೆಗೆ ಸಿದ್ಧವಾಗುತ್ತದೆ. ಮಹಿಳೆಯನ್ನು ಯಾರಾದರೂ ಪ್ರತಿನಿಧೀಕರಿಸಬಹುದು. ಆದರೆ ಅವಳೆ ತನ್ನನ್ನು ಪ್ರತಿನಿಧೀಕರಿಸಕೂಡದು ಎಂಬ ವ್ಯಂಗ್ಯ ಇಲ್ಲಿದೆ. ಹೀಗಾಗಿ ಸ್ವಾಭಿವ್ಯಕ್ತಿಯಲ್ಲಿ ರೂಢಿಗತ ಸಮಾಜದತ್ತ ಸದಾ ಎಚ್ಚರವಾಗಿದ್ದು ತಂತಿಯ ಮೇಲೆ ನಡೆಯುವ ಹಾಗೆ ಮಹಿಳೆ ತನ್ನ ನಿಜಗಳನ್ನು ಹೇಳಲು ಹವಣಿಸುತ್ತಾಳೆ.

**ಕೊನೆಟಿಪ್ಪಣಿಗಳು**

1. ಅನುಪಮಾ ನಿರಂಜನ. (2015). ಮಾಧವಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ. ಪುಟ–156
2. ಅದೇ. ಪುಟ–161
3. ಅದೇ. ಪುಟ–165
4. ಅದೇ. ಪುಟ–173
5. ಅದೇ. ಪುಟ–173
6. ಅದೇ. ಪುಟ–181
7. ಅದೇ. ಪುಟ–11
8. ಅದೇ. ಪುಟ–36
9. ಅದೇ. ಪುಟ–5
10. ನಾಗರಾಜ, ಸಿ.ಪಿ. (2022). ಬಸವಯುಗದ ವಚನಕಾರರು, ನಾಗು ಸ್ಮಾರಕ ಪ್ರಕಾಶನ. ಪುಟ–169